ಸಂದರ್ಶನ: **ಬೆಳಚಿಕ್ಕನಹಳ್ಳಿ ಶ್ರೀನಾಥ್**

# ನಾನು ವಿಮರ್ಶಕರನ್ನು ತಿರಸ್ಕರಿಸಿದ್ದೇನೆ...

ಕೇಶವರೆಡ್ಡಿ ಹಂದ್ರಾಳ, ಕಳೆದ ಮೂರೂವರೆ ದಶಕಗಳಿಂದ ನಿರಂತರವಾಗಿ ಬರೆಯುತ್ತಿರುವ ಕಥೆಗಾರ. ಗ್ರಾಮೀಣ ಬದುಕನ್ನು ಅದರೆಲ್ಲ ಸಂಕಟ ಸಂಭ್ರಮಗಳೊಂದಿಗೆ ತಮ್ಮ ಕಥೆಗಳಲ್ಲಿ, ಪ್ರಬಂಧಗಳಲ್ಲಿ ದಾಖಲಿಸಿದವರು ಹಂದ್ರಾಳ. ಅವರ 'ಒಕ್ಕಲ ಒನಪು' ಕನ್ನಡ ಸಾಹಿತ್ಯದಲ್ಲಿ ವಿಶೇಷ ಸ್ಥಾನವುಳ್ಳ ಕೃತಿ. ದಲಿತ ಆತ್ಮಕಥೆಗಳಂತೆ ಗ್ರಾಮೀಣ ಶೂದ್ರ ಬದುಕನ್ನು ಹಂದ್ರಾಳ ಕಂಡರಿಸಿದ ರೀತಿ ಅನನ್ಯವಾದುದು. ಅದರಲ್ಲಿ ತೆರೆದುಕೊಳ್ಳುವ ಹಳ್ಳಿಯ ಪರಿಸರ, ನಾಗರಿಕತೆಯ ಸೋಗಿಲ್ಲದ 'ನಾಟಿ' ಆಡುನುಡಿ, ದೈನಿಕದ ಮೂಲಕವೇ ವ್ಯಕ್ತಗೊಳ್ಳುವ ಅವರ ಬದುಕಿನ ತಾತ್ವಿಕತೆ ಬೆರಗು ಮೂಡಿಸುವಷ್ಟು ವಿಶಿಷ್ಟವಾಗಿವೆ. ಇಂಥ ಕೃತಿಯನ್ನು ಕೊಟ್ಟ ಕೇಶವರೆಡ್ಡಿಯವರ ಬದುಕು, ಸಾಹಿತ್ಯ ಸೃಷ್ಟಿ ಇತ್ಯಾದಿಗಳ ಕುರಿತ ಮಾತುಕತೆ ಇಲ್ಲಿದೆ.



ಚಿತ್ರಗಳು: ಎಂ.ಎಸ್. ಮಂಜುನಾಥ್